ದೂರವಾಣಿ ಸಂಖ್ಯೆ : 080-22212343
ಫ್ಯಾಕ್ಸ್ ಸಂಖ್ಯೆ : 080-22278803
ಅಂತರ್ಜಾಲ : www.kptcl.com

ಇ-ಮೇಲ್ ವಿಳಾಸ:director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್.) : ಯು40109ಕೆಎ1999ಎಸ್‌ಜಿಸಿ025521
ಕಂಪನಿಯ ಅಧಿಕೃತ ಕಛೇರಿ : ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009.

ದಿನಾಂಕ : 19 NOV 2018

ಕವಿಪ್ರನಿನಿ/ಬಿ9/85303/18-19

## ಸುತ್ತೋಲೆ

ವಿಷಯ:- ನಿಗಮದಲ್ಲಿ ನಿರ್ವಹಿಸುವ ಕಾಮಗಾರಿಗಳಿಗೆ ಬಳಸುವ ಉಪ ಖನಿಜಗಳ ರಾಜಧನದ ಪ್ರಮಾಣವನ್ನು ಮೆಟ್ರಿಕ್ ಟನ್‌ಗಳಿಂದ ಕ್ಯೂಬಿಕ್ ಮೀಟರ್‌ಗಳಿಗೆ ಪರಿವರ್ತಿಸುವ ಕೋಷ್ಠಕದ ಬಗ್ಗೆ.

ಉಲ್ಲೇಖ:-
1. ಸರ್ಕಾರದ ಅಧಿಸೂಚನಾ ಪತ್ರ ಸಂಖ್ಯೆ ಸಿಐ81/ಎಂಎಂಎನ್-2014 ದಿನಾಂಕ 05/03/2014.
2. ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಸುತ್ತೋಲೆ ಸಂಖ್ಯೆ ಗಭೂಇ/ಡಿಸಿಬಿ/ಕಗಗು/ರಾ.ಪ.ಕೋ/2013-14 ದಿನಾಂಕ 13/03/2014.
3. ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಸುತ್ತೋಲೆ ಸಂಖ್ಯೆ ಗಭೂಇ/ಡಿಸಿಬಿ/ಡಿಜೈನ್/2018-19/2040 ದಿನಾಂಕ 06/09/2018.

***********

ಉಲ್ಲೇಖ (1) ರ ಸರ್ಕಾರದ ಅಧಿಸೂಚನೆ ಪತ್ರದಲ್ಲಿ ದಿನಾಂಕ 01/03/2014 ರಿಂದ ಜಾರಿಗೆ ಬರುವಂತೆ ಕಾಮಗಾರಿಗಳಿಗೆ ಬಳಸುವ ಉಪ ಖನಿಜಗಳ ಮೇಲಿನ ರಾಜಧನ ಮೊತ್ತವನ್ನು ಪರಿಷ್ಕರಿಸಲಾಗಿದೆ. ಪರಿಷ್ಕರಿಸಿದ ರಾಜಧನ ದರಗಳಿಗೆ ಕಾಮಗಾರಿಯಲ್ಲಿ ಬಳಸುವ ಉಪ ಖನಿಜಗಳಾದ ಕಟ್ಟಡ ಕಲ್ಲು, ಜಲ್ಲಿ, ಮರಳು, ಇಟ್ಟಿಗೆಮಣ್ಣು ಗ್ರಾವೇಲ್ (ಮುರಂ), ಮುಂತಾದ ಉಪ ಖನಿಜಗಳ ಮೇಲಿನ ರಾಜಧನ ಪ್ರಮಾಣವನ್ನು ಮೆಟ್ರಿಕ್ ಟನ್‌ಗಳಿಂದ ಕ್ಯೂಬಿಕ್ ಮೀಟರ್‌ಗಳಿಗೆ ಪರಿವರ್ತಿಸಿದ ದರಗಳನ್ನು ಉಲ್ಲೇಖ (2) ರಲ್ಲಿನ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಸುತ್ತೋಲೆಯಲ್ಲಿ ನೀಡಲಾಗಿತ್ತು. ಸದರಿ ಪರಿವರ್ತನಾ ಕೋಷ್ಟಕ ಈ ಕೆಳಕಂಡಂತೆ ಇರುತ್ತದೆ.

| ಕ್ರ ಸಂ | ಉಪ ಖನಿಜ | ರಾಜಧನ ಪ್ರತಿ ಮೆಟ್ರಿಕ್ ಟನ್ ಗೆ | ಪರಿವರ್ತನ ಕೋಷ್ಟಕ ಕ್ಯೂಬಿಕ್ ಮೀಟರ್ ನಂತೆ | ರಾಜಧನ ಪ್ರತಿ ಕ್ಯೂಬಿಕ್ ಮೀಟರ್ ಗೆ |
|---|---|---|---|---|
| 1 | ಕಟ್ಟಡ ಕಲ್ಲು | ರೂ.60 | 1 ಕ್ಯೂಬಿಕ್ ಮೀಟರ್‌ಗೆ =2.63 ಟನ್ | ರೂ.158/- |
| 2 | ಲ್ಯಾಟರೈಟ್ ಸ್ಟೋನ್ | ರೂ.60 | 1 ಕ್ಯೂಬಿಕ್ ಮೀಟರ್‌ಗೆ =1.80 ಟನ್ | ರೂ.108/- |
| 3 | ಜಲ್ಲಿ/ಮೆಟಲ್ ಎಲ್ಲಾ ವಿಧವಾದ (ಗ್ರಾನೈಟ್) | ರೂ.60 | 1 ಕ್ಯೂಬಿಕ್ ಮೀಟರ್‌ಗ =1.80 ಟನ್ | ರೂ.108/- |
| 4 | ಜಲ್ಲಿ/ಮೆಟಲ್ (ಕ್ವಾರ್ಟ್‌ಜೈಟ್) | ರೂ.60 | 1 ಕ್ಯೂಬಿಕ್ ಮೀಟರ್‌ಗೆ =1.80 ಟನ್ | ರೂ.108/- |
| 5 | ಮರಳು | ರೂ.60 | 1 ಕ್ಯೂಬಿಕ್ ಮೀಟರ್‌ಗ =1.72 ಟನ್ | ರೂ.103/- |
| 6 | ಗ್ರಾವೇಲ್ (ಮುರಂ) | ರೂ.20 | 1 ಕ್ಯೂಬಿಕ್ ಮೀಟರ್‌ಗ =1.50 ಟನ್ | ರೂ.30/- |
| 7 | ಮಣ್ಣು (ಎಲ್ಲಾ ತರಹದ ಹೆಂಚು ಮತ್ತು ಇಟ್ಟಿಗೆ ತಯಾರಿಕೆಗಾಗಿ) | ರೂ.40 | 1 ಕ್ಯೂಬಿಕ್ ಮೀಟರ್‌ಗೆ =1.50 ಟನ್ | ರೂ.60/- |

ಆದಾಗ್ಯೂ, ಹಲವು ಇಲಾಖೆಯ ಕಾಮಗಾರಿಯ ಬಿಲ್ಲುಗಳಲ್ಲಿ ಮೆಟ್ರಿಕ್ ಟನ್‌ಗಳಿಂದ ಕ್ಯೂಬಿಕ್ ಮೀಟರ್‌ಗಳಿಗೆ ಸರಿಯಾಗಿ ಪರಿವರ್ತಿಸದೆ ಕಡಿಮೆ ರಾಜಧನ ಪಾವತಿಯಾಗುತ್ತಿದೆಂದು ಉಲ್ಲೇಖ (3) ರಲ್ಲಿನ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಸುತ್ತೋಲೆಯಲ್ಲಿ ತಿಳಿಸಲಾಗಿದೆ.

ಈ ಸಂಬಂಧ, ನಿಗಮ ನಿರ್ವಹಿಸುವ ಎಲ್ಲಾ ಕಾಮಗಾರಿಗಳಿಗೆ ಬಳಸುವ ಉಪಖನಿಜಗಳ ರಾಜಧನದ ಪ್ರಮಾಣವನ್ನು ಮೇಲೆ ತಿಳಿಸಿರುವ ಕೋಷ್ಟಕದಂತೆ ಪರಿವರ್ತಿಸಿ ರಾಜಧನವನ್ನು ಕಟಾಯಿಸಲು ಸೂಚಿಸಲಾಗಿದೆ. ಮುಂದುವರೆದಂತೆ ಹಿಂದಿನ ಸಾಲಿನಲ್ಲಿ, ಮೆಟ್ರಿಕ್ ಟನ್‌ಗಳಿಂದ ಕ್ಯೂಬಿಕ್ ಮೀಟರ್‌ಗಳಿಗೆ ಪರಿವರ್ತಿಸುವಲ್ಲಿ ವ್ಯತ್ಯಾಸ ಇದ್ದಲ್ಲಿ, ವ್ಯತ್ಯಾಸದ ಮೊತ್ತವನ್ನು ಪಾವತಿಸಿಕೊಳ್ಳಲು ಸಹ ಕ್ರಮ ಕೈಗೊಳ್ಳುವುದು. ಸರ್ಕಾರದ ಆದೇಶದಂತೆ ಕಾಮಗಾರಿಗಳ ಬಿಲ್ಲುಗಳಲ್ಲಿ ಸರಿಯಾದ ರಾಜಧನದ ಮೊತ್ತವನ್ನು ಕಟಾಯಿಸಬೇಕಾಗಿದ್ದು, ತಪ್ಪಿದಲ್ಲಿ, ಸಂಬಂಧಪಟ್ಟ ಅಧಿಕಾರಿಗಳನ್ನು ನೇರ ಹೊಣೆಗಾರರನ್ನಾಗಿ ಮಾಡಲಾಗುವುದು.

19/11/18

ಉಪ ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ)
ಕವಿಪ್ರನಿನಿ, ಬೆಂಗಳೂರು.

ಪ್ರತಿಗಳು:-

1. ಎಲ್ಲಾ ಮುಖ್ಯ ಇಂಜಿನಿಯರುಗಳು (ವಿ), ಪ್ರಸರಣ ವಲಯ, ಕವಿಪ್ರನಿನಿ.
2. ಮುಖ್ಯ ಇಂಜಿನಿಯರ್ (ವಿ), (ಪಿ ಮತ್ತು ಸಿ). ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
3. ಮುಖ್ಯ ಇಂಜಿನಿಯರ್ (ವಿ), (ಟಿ ಮತ್ತು ಪಿ). ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
4. ಮುಖ್ಯ ಇಂಜಿನಿಯರ್ (ವಿ), (ಟಿ.ಎ ಮತ್ತು ಕ್ಯೂಸಿ), ಕವಿಪ್ರನಿನಿ. ಕಾವೇರಿ ಭವನ, ಬೆಂಗಳೂರು.
5. ಆರ್ಥಿಕ ಸಲಹೆಗಾರರು (ಎ ಮತ್ತು ಆರ್) / (ಅಂಪ), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
6. ಎಲ್ಲಾ ಅಧೀಕ್ಷಕ ಇಂಜಿನಿಯರುಗಳು (ವಿ) ಪ್ರಸರಣ ವೃತ್ತ, ಕವಿಪ್ರನಿನಿ.
7. ಎಲ್ಲಾ ನಿಯಂತ್ರಣಾಧಿಕಾರಿಗಳು, ಪ್ರಸರಣ ವಲಯ, ಕವಿಪ್ರನಿನಿ.
8. ಅಧೀಕ್ಷಕ ಇಂಜಿನಿಯರ್ (ಸಿವಿಲ್), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
9. ಅಧೀಕ್ಷಕ ಇಂಜಿನಿಯರ್ (ವಿ), (ಐಟಿ ಮತ್ತು ಎಂಐಎಸ್), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು ಸದರಿ ಸುತ್ತೋಲೆಯನ್ನು ನಿಗಮದ ವೆಬ್ ಸೈಟ್ ನಲ್ಲಿ ಪ್ರಕಟಿಸಲು ಕೋರಿದೆ.
10. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರುಗಳು (ವಿ), ಬೃಹತ್ ಕಾಮಗಾರಿ/ ಟಿಎಲ್ ಮತ್ತು ಎಸ್ ಎಸ್ ವಿಭಾಗ, ಕವಿಪ್ರನಿನಿ.
11. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರುಗಳು (ಸಿವಿಲ್), ಪ್ರಸರಣ ವಲಯ, ಕವಿಪ್ರನಿನಿ.
12. ಎಲ್ಲಾ ಉಪಲೆಕ್ಕನಿಯಂತ್ರಣಾಧಿಕಾರಿಗಳು, ಪ್ರಸರಣ ವಲಯ, ಕವಿಪ್ರನಿನಿ.
13. ಎಲ್ಲಾ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರುಗಳು (ವಿ) / (ಸಿ), ಪ್ರಸರಣ ವಲಯ, ಕವಿಪ್ರನಿನಿ.
14. ಎಲ್ಲಾ ಲೆಕ್ಕಾಧಿಕಾರಿಗಳು, ಪ್ರಸರಣ ವಲಯ, ಕವಿಪ್ರನಿನಿ.